ಜಿಲ್ಲಾ ಪರಿಷತ್‌ನ ರಸ್ತೆಗಳಿಗೆ	5.00	4.18	5.40	4.50	7.51	6.00
ಒಟ್ಟು	37.69	36.87	47.59	46.69	54.61	53.10

ಬಚಾವತ್ ತೀರ್ಪಿನ ಪ್ರಕಾರ ಕೃಷ್ಣಾನದಿ ನೀರಿನ ಹಂಚಿಕೆ

1208 (442): ಶ್ರೀ ಡಿ.ಆರ್. ಪಾಟೀಲ್ (ಗದಗ್):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಚಾವತ್ ತೀರ್ಪಿನ ಪ್ರಕಾರ ಕೃಷ್ಣಾ ನದಿ ನೀರಿನಲ್ಲಿ ರಾಜ್ಯದ ಪಾಲನ್ನು ಸಂಪೂರ್ಣವಾಗಿ ಬಳಸಲು ಒಂದು ಸಮಗ್ರ ಕಾರ್ಯಕ್ರಮ ರೂಪಿಸಲಾಗಿದೆಯೆ;

ಆ) ಈ ಕಾರ್ಯಕ್ರಮ 2000ದ ವೇಳೆಗೆ ಪೂರ್ಣಗೊಳಿಸಲು ಬೇಕಾಗುವ ಒಟ್ಟು ಹಣಕಾಸು ಎಷ್ಟು (ಯೋಜನಾವಾರು ವಿವರ ನೀಡುವುದು);

ಇ) ಈ ಹಣಕಾಸು ಒದಗಿಸಲು ಸರಕಾರ ಕೈಕೊಳ್ಳುವ ಕ್ರಮಗಳೇನು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಹೌದು.

ಆ) ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಇ) 1. ಕೃಷ್ಣಾ ಕೊಳ್ಳ ಪ್ರಾಧಿಕಾರವನ್ನು ರಚಿಸುವುದು.
2. ನೀರಾವರಿ ಬಾಂಡ್‌ಗಳನ್ನು ಬಿಡುಗಡೆ ಮಾಡುವುದು.
3. ನೀರಾವರಿ ಅಭಿವೃದ್ಧಿ ಬ್ಯಾಂಕ್‌ಗಳನ್ನು ಸ್ಥಾಪಿಸುವುದು.
4. ಯೋಜನೆಗಳನ್ನು ವಿದೇಶ ನೆರವಿಗಾಗಿ, ವಿಶ್ವಬ್ಯಾಂಕ್ ಮತ್ತು ಇತರ ದೇಶಗಳ ನೆರವಿಗಾಗಿ ಪ್ರಸ್ತಾಪಿಸುವುದು.

ಅನುಬಂಧ 1

(ಕೋಟಿ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಬೇಕಾಗುವ ಹಣ (ಪ್ರಸ್ತುತ ದರದಂತೆ)
1	2	3
ಅ.	<u>ಕೃಷ್ಣಾ ಕೊಳ್ಳ</u>	
1.	ಕೃಷ್ಣಾ ಮೇಲ್ದಂಡೆ – 1	788.00
2.	ಹಿಪ್ಪರಗಿ	246.74
3.	ಘಟಪ್ರಭಾ – 3	367.72
4.	ಮಲಪ್ರಭಾ	103.31
5.	ಬೆಣ್ಣೆಕೋರಾ	51.29
6.	ಭದ್ರಾ	42.35
7.	ತುಂಗಭದ್ರಾ ಎಡದಂಡೆ ಕಾಲುವೆ	32.84
8.	ತುಂಗಭದ್ರಾ ಬಲದಂಡೆ ಮೇಲ್ಗಾಲುವೆ	10.26
9.	ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆ	17.38
10.	ದೂಧ್‌ಗಂಗಾ	25.88
11.	ಮಾರ್ಕಂಡೇಯ	127.00
12.	ಮಹಾದಾಯಿ	87.98
13.	ರಾಮ್‌ಥಾಲ್ ಏತ ನೀರಾವರಿ	95.00
14.	ಭೀಮಾ ಫ್ಲೋ	117.72
15.	ಭೀಮಾ ಏತ ನೀರಾವರಿ	68.67
16.	ಕೃಷ್ಣಾ ಮೇಲ್ದಂಡೆ – 2	780.00
17.	ಭದ್ರಾ ಮೇಲ್ದಂಡೆ	517.00
18.	ತುಂಗಾ ಮೇಲ್ದಂಡೆ	330.00
19.	ಪಿಂಗಟ್‌ಲೂರ್	55.83
20.	ಅಮರಜಾ	21.39
21.	ಕೆಳವರು ಮುಲ್ಲಾಮಾರಿ ಕೆಳದಂಡೆ	32.97
22.	ಹಿರೇಹಳ್ಳ	39.90
23.	ಇಟ್ಟಗಿ ಸಾಸಲವಾಡ್	4.27
24.	ಮಸ್ಕಿ ನಾಲಾ	19.78
25.	ರಾಣಿಕೆರೆ ಪೂರಕ ನಾಲೆ	0.94
26.	ಬಸಾಪುರ್	4.55
27.	ಗಂಡೋರಿ ನಾಲಾ	37.75
28.	ಹೋಡಿರಾಯನ ಹಳ್ಳ	2.83
29.	ಮದಗ್ ಮಾನೂರ್	16.33
30.	ಕಾಗಿನ	37.71

31.	ಭದ್ರಾ ಆಣೆಕಟ್ಟು ಆಧುನೀಕರಣ	1.00
32.	ಹರಿ ನಾಲಾ	15.00
33.	ದಂಡವತಿ	37.00
	ಒಟ್ಟು ಕೃಷ್ಣ ಕೊಳ್ಳ	4135.64

ಮಂಚನಬೆಲೆ ಆಣೆಕಟ್ಟೆಯಿಂದಾಗಿ ಜಮೀನು ಕಳೆದುಕೊಂಡವರಿಗೆ ಪುನರ್ ವಸತಿ

1212 (522): ಶ್ರೀ ಅಂಜನಮೂರ್ತಿ (ನೆಲಮಂಗಲ):-

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಚನಬೆಲೆ ಆಣೆಕಟ್ಟು ಯೋಜನೆಯಲ್ಲಿ ಭೂಸ್ವಾಧೀನ ಮಾಡಿಕೊಂಡಿರುವ ಭೂ ವಿಸ್ತೀರ್ಣವೆಷ್ಟು;

ಆ) ಈ ಯೋಜನೆ ಅಡಿಯಲ್ಲಿ ಜಮೀನು ಕಳೆದುಕೊಂಡ ಕುಟುಂಬಗಳಿಗೆ, ಅದರಲ್ಲೂ ಮುಖ್ಯವಾಗಿ ದಾಸನಪುರ ಹೋಬಳಿಯ ಕಡಬಗೆರೆ ಗ್ರಾಮದ ಎಷ್ಟು ಕುಟುಂಬಗಳಿಗೆ ಪುನರ್ವಸತಿ ಮತ್ತು ಜಮೀನು ಪರಿಹಾರವನ್ನು ನೀಡಲಾಗಿದೆ. (ಪೂರ್ಣ ವಿವರಗಳನ್ನು ನೀಡುವುದು) ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):-

ಅ) 248 ಹೆಕ್ಟೇರುಗಳು

ಆ) ಈ ಯೋಜನೆ ಅಡಿಯಲ್ಲಿ ಒಟ್ಟು 190 ಕುಟುಂಬಗಳು ಜಮೀನು ಕಳೆದುಕೊಂಡಿದ್ದು, ಅದರಲ್ಲಿ ವೀರಾಪುರದ 40 ಕುಟುಂಬದವರನ್ನು ಕಡಬಗೆರೆಗೆ ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲಾಗಿದೆ. ಜಮೀನು ಕಳೆದುಕೊಂಡವರೆಲ್ಲರಿಗೂ ಜಮೀನು ಪರಿಹಾರ ಕೊಡಲಾಗಿದೆ.

ಕುಮುದ್ವತಿ ನದಿಗೆ ಅಡ್ಡಲಾಗಿ ಮೋರಿಗಳ ನಿರ್ಮಾಣ

1213 (528): ಶ್ರೀ ಅಂಜನಮೂರ್ತಿ (ನೆಲಮಂಗಲ):-

ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ತಾಲ್ಲೂಕಿನ ಅಗಲಕುಪ್ಪೆ ಹೊಸಹಳ್ಳಿ ಹನುಮಂತೇಗೌಡನ ಪಾಳ್ಯ, ಚಿಕ್ಕಮಾರನ ಹಳ್ಳಿಗಳ ಸಮೀಪ ಕುಮುದ್ವತಿ ನದಿಗೆ ಅಡ್ಡಲಾಗಿ ಮೋರಿಗಳನ್ನು ನಿರ್ಮಿಸಬೇಕೆಂದು ಮನವಿಗಳೇನಾದರೂ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಹೌದು.

ಆ) ಅಗಲಕುಪ್ಪೆ ಹೊಸಹಳ್ಳಿ ನಡುವೆ ಕುಮುದ್ವತಿ ನದಿಗೆ ಅಡ್ಡಲಾಗಿ ಬರುವ ಸೇತುವೆಗೆ ಸರ್ಕಾರದಿಂದ ದಿನಾಂಕ 12-1-1993ರಂದು ರೂ. 14.00 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.